6. Adireddypally
7. Narayanapally

ಅಖಿಲ ಭಾರತ ರಸ್ತೆ ಅಭಿವೃದ್ಧಿ ಯೋಜನೆ.

(1007)ಶ್ರೀ ಜಿ.ರಾಜುಗೌಡ (ಹನೂರು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ 1986 ರಿಂದ 1991ರವರೆಗೆ ಅಖಿಲ ಭಾರತ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಿಗಾಗಿ ನಿಗದಿಪಡಿಸಿರುವ ಗುರಿ ಎಷ್ಟು;

ಆ ಬೆಂಗಳೂರು ಸುತ್ತ ಮುತ್ತ ಎಷ್ಟು ಕಿ.ಮೀ. ವರೆವಿಗೆ ನಾಲ್ಕು ವಾಹನಗಳು ಏಕ ಕಾಲದಲ್ಲಿ ಚಲಿಸಲು ಅನುಕೂಲವಾಗುವಂತಹ ರಾಷ್ಟ್ರೀಯ ಹೆದ್ದಾರಿಗಳನ್ನು ಕೇಂದ್ರ ಸರ್ಕಾರವು ಮಂಜೂರು ಮಾಡಿದೆ ;

ಇ ಇದಕ್ಕೆ ತಗಲುವ ವೆಚ್ಚವೆಷ್ಟು;

ಈ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಹಾಗೂ ನಿರ್ವಹಣೆಗೆ ರಾಜ್ಯಕ್ಕೆ ನೀಡಿರುವ ನೆರವು ಎಷ್ಟು?

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):-

ಅ 1986 ರಿಂದ 1991ರವರೆಗೆ ಕೇಂದ್ರ ವಿಭಾಗದ ಅಡಿಯಲ್ಲಿ 3500-00 ಕೋಟಿ ರೂ.ಗಳನ್ನು ಅಖಿಲ ಭಾರತ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ನಿಗದಿಪಡಿಸಲಾಗಿದೆ. ರಾಜ್ಯವಾರು ಹಂಚಿಕೆ ನಿಗದಿಪಡಿಸಿಲ್ಲ. ಆದರೆ ಕೇಂದ್ರ ಸರ್ಕಾರವು ರೂ. 110 ಕೋಟಿಯನ್ನು ರಾಜ್ಯದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ಈ 5 ವರ್ಷದಲ್ಲಿ ಕೊಟ್ಟಿದೆ.

ಆ ಬೆಂಗಳೂರು ಪೂನಾ ರಸ್ತೆಯಲ್ಲಿ ಬೆಂಗಳೂರಿನಿಂದ 20 ಕಿ.ಮೀ. ಉದ್ದದವರೆಗೆ (ಕಿ.ಮೀ 10 ರಿಂದ30) ರಸ್ತೆಯನ್ನು 4 ಪಥ ರಸ್ತೆಯನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರವು ಮಂಜೂರು ಮಾಡಿದ್ದು ಕೆಲಸವು ಪೂರ್ಣವಾಗಿದೆ.

ಇ ಇದಕ್ಕೆ 547.33 ಲಕ್ಷ ರೂ.ಗಳ ಖರ್ಚಾಗಿದೆ.

ಈ ರಾಜ್ಯದಲಿ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ 79.78 ಕೋಟಿ ರೂ.ಗಳು ಹಾಗೂ ನಿರ್ವಹಣೆಗೆ 29.92 ಕೋಟಿ ರೂ.ಗಳನ್ನು 1986-1991 ರಲ್ಲಿ ರಾಜ್ಯಕ್ಕೆ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳು.

(1955)ಶ್ರೀ ಆರ್.ವಿ.ದೇಶಪಾಂಡೆ (ಹಳಿಯಾಳ):- ಮಾನ್ಯ ಸಣ್ಣ ನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ ಉತ್ತರ ಕನ್ನಡ ಜಿಲ್ಲೆಯ ಯಾವ ಯಾವ ಭಾಗಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಮಾಡಬಹುದೆಂದು ತಜ್ಞರು ಅಭಿಪ್ರಾಯ. ಪಟ್ಟಿದ್ದಾರೆ ;

ಆ ಇದರ ಪೈಕಿ ಸರ್ಕಾರ ಕಳೆದ 2ವರ್ಷಗಳಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದೆ ;

ಇ ಇದರಲ್ಲಿ ಎಷ್ಟು ಕಾರ್ಯಗತವಾಗಿದೆ, ಎಷ್ಟು ಕಾರ್ಯಗತವಾಗುವ ಅಂಚಿನಲ್ಲಿವೆ ;

ಈ ಇದಕ್ಕಾಗಿ ಮುಂಗಡ ಪತ್ರದಲ್ಲಿ ಮೀಸಲಾಗಿಟ್ಟಿದ್ದ ಹಣವೆಷ್ಟು ;